ಶ್ರೀ ಟಿ. ಎನ್. ನರಸಿಂಹಮೂರ್ತಿ :– ಮಾನ್ಯ ಸದಸ್ಯರು ಏನೆಲ್ಲಾ ಹೇಳಿದ್ದಾರೆ ಅದನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಇದನ್ನು ಸರಿಪಡಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ವಿಷಯ :– ಮಂಗಳೂರು — ಕೇರಳ ಗಡಿ ತಲಪಾಡಿ ಹೆದ್ದಾರಿಯಲ್ಲಿ ಆಗಿರುವ ವಾಹನ ಅಪಘಾತಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 276 (1230)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ಕಂಕನಾಡಿಯಿಂದ ಕೇರಳದ ಗಡಿ ತಲಪಾಡಿ ವರೆಗಿನ 17 ಕಿ. ಮೀ. ಹೆದ್ದಾರಿಯಲ್ಲಿ 1987–88, 1988–89, 1989–90 ನೇ ಅಕ್ಟೋಬರ್ ಅಂತ್ಯದವರೆಗೆ ಆಗಿರುವ ವಾಹನ ಅಪಘಾತಗಳೆಷ್ಟು ?

ಆ) ಇದರಿಂದ ಆದ ಜೀವಹಾನಿಯೆಷ್ಟು ? ತೀವ್ರತರ ಜಖಂ ಆದವರೆಷ್ಟು,ಸೊತ್ತು ನಾಶವೆಷ್ಟು ?

ಇ) ಈ ಸಣ್ಣ ದೂರದ ರಸ್ತೆಯ ವಾಹನ ಅಪಘಾತಗಳನ್ನು ತಪ್ಪಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು) :–

ಅ)

1987	1988	1989	1990	(ಅಕ್ಟೋಬರ್ ಅಂತ್ಯದವರೆಗೆ)
32	43	34	32	

ಆ)

	1987	1988	1989	1990	(ಅಕ್ಟೋಬರ್ಅಂತ್ಯದವರೆಗೆ)
ಸತ್ತವರು	6	11	10	18	
ಗಾಯಗೊಂಡವರು	7	9	19	18	

ವಾಹನ ಅಪಘಾತಗಳಿಂದ ಉಂಟಾದ ಸೊತ್ತು ನಾಶವನ್ನು ಸಂಬಂಧಪಟ್ಟ ವಿಮಾ ಸಂಸ್ಥೆಗಳವರು ಭರಿಸಬೇಕಾಗಿರುವುದರಿಂದ ಸೊತ್ತು ನಾಶದ ಸಮೀಕ್ಷೆಯನ್ನು ವಿಮಾ ಸಂಸ್ಥೆಯವರು ನಡೆಸುತ್ತಾರೆ.

ಇ) ಈ ಸಣ್ಣ ದೂರದ ರಸ್ತೆಯ ವಾಹನ ಅಪಘಾತಗಳನ್ನು ತಪ್ಪಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1) ಅವಶ್ಯವಿರುವ ಕಡೆಗಳಲ್ಲಿ ಸೂಚನಾ ಫಲಕಗಳನ್ನು ಹಾಕಲಾಗಿದೆ.

2) ಓವರ್ ಸ್ಪೀಡಿಂಗ್ ಓವರ್ ಲೋಡಿಂಗ್ ಸಂಚರಿಸುವ ಟ್ರಕ್ಸ್ ಮತ್ತು ಇತರೆ ವಾಹನಗಳನ್ನು ತಪಾಸಣೆ ಮಾಡಿ ಪ್ರಕರಣಗಳನ್ನು ಪತ್ತೆ ಹಚ್ಚಲಾಗುತ್ತಿದೆ.

3) ಎಕ್ಸ್‌ಪ್ರೆಸ್ ಸಿಟಿಬಿಸ್‌ಗಳ ಸ್ಪರ್ಧೆ ನಡೆಸಿ ಓಡುವುದನ್ನು ತಪ್ಪಿಸಲು ನಿಗದಿತ ವೇಳೆಯಲ್ಲಿಯೇ ಸಂಚರಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.

4) ರಸ್ತೆ ಸಮದಟ್ಟಗೊಳಿಸಲಾಗಿದೆ.

5) ರಸ್ತೆ ಅಗಲಗೊಳಿಸುವ ಸಲುವೆ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಎಂ. ಇದಿನಬ್ಬ :– ಮಾನ್ಯ ಅಧ್ಯಕ್ಷರೇ, ಕಂಕನಾಡಿಯಿಂದ ತಲಪಾಡಿಯವರೆಗಿನ 17 ಕಿಲೋ ಮೀಟರ್ ದೂರ ಏನು ಇದೆ ಅಲ್ಲಿ 142 ಜೀವ ಅಪಘಾತದಲ್ಲಿ ಹೋಗಿದೆ. ಇದಕ್ಕೆ ಕಾರಣ, ಓವರ್ ಸ್ಪೀಡ್, ಓವರ್ ಲೋಡ್ ವಾಹನಗಳ ಓಡಾಟ ಹೆಚ್ಚಿನ ತಿಕ್ಕಾಟದಿಂದ ಹೀಗಾಗುತ್ತಿದೆ ಎನ್ನುವುದರಲ್ಲಿ ಯಾವ ಅನುಮಾನ ವಿಲ್ಲ. ಈ ರೀತಿ ಅನಾಹುತ ಆಗುತ್ತದೆ. ಇದರ ತಪಾಸಣೆ ಸರಿಯಾಗಿ ಮಾಡುತ್ತಿದೆಯೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಈ ತಪಾಸಣೆ ಏನೇನೂ ಸಾಲದು. ಇನ್ನೂ ಹೆಚ್ಚು ತಪಾಸಣೆಗಳನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಧರ್ಮಸಿಂಗ್ :– ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ, ಆದರೂ ಕೂಡ ಇವತ್ತು ವೆಹಿಕಲ್ಸ್ ಕಾಂಪಿಟೇಷನ್‌ನಿಂದ ಓಡಾಡುತ್ತಿವೆ; ಇದು ಎಲ್ಲಾ ಕಡೆ ಆಗುತ್ತಿದೆ. ಅದಕ್ಕೆ ಗವರ್ನರ್ ಫಿಕ್ಸ್ ಮಾಡಿದರೂ ಕೂಡ ಹೈಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದಾರೆ. ಇದಕ್ಕೆ ಲೋಕೋಪಯೋಗಿ ಇಲಾಖೆ ಮತ್ತು ಸಾರಿಗೆ ಇಲಾಖೆಯ ಕೋಆರ್ಡಿನೇಷನ್ ಕೂಡ ಬೇಕು. ಅವರ ಹೊಂದಾಣಿಕೆಯ ಜೊತೆಯಲ್ಲಿ ಇದನ್ನು ಸರಿಪಡಿಸಬೇಕಾಗುತ್ತದೆ. ರೋಡ್ ವೈಡನಿಂಗ್ ಮಾಡಬೇಕಾಗುತ್ತದೆ. ನಿನ್ನೆ ಕೂಡ ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿದೆ. ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇನೆ. ನಮ್ಮ ಕಮಿಟಿ ಎಕ್ಸಾಸ್ಟಿಂಗ್ ಇದ್ದರೂ ಕೂಡ ಎಲ್ಲಾ ಕಡೆ ರೋಡ್ ಆಕ್ಸಿಡೆಂಟ್ ಆಗ-ತಕ್ಕಂಥಾದ್ದು ದಿನೇ ದಿನೇ ಬೆಳೆಯುತ್ತಿದೆ. ಸಂಬಂಧಪಟ್ಟ ಇಲಾಖೆಯವರಿಗೆ ಕೋಆರ್ಡಿನೇಷನ್ ಬೇಕಾಗುತ್ತದೆ. ಇದರ ಬಗ್ಗೆ ಎಚ್ಚರಿಕೆ ಕೊಟ್ಟಿದ್ದೇವೆ. ಮುಂದೆ ಬರತಕ್ಕಂತಹ ದಿವಸಗಳಲ್ಲಿ ನಿಯಂತ್ರಣ ಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ :– ಈ 17 ಕಿಲೋ ಮೀಟರ್ ಜಾಗ ಏನು ಇದೆ ಇಲ್ಲಿ ತಳಪಾಡಿ ದಾಟಿದರೆ ಕೇರಳಕ್ಕೆ ಹೋಗುತ್ತದೆ. ಇಲ್ಲಿ ಹೆಚ್ಚಿನ ಕಾರು, ಟ್ಯಾಕ್ಸಿಗಳಲ್ಲಿ ಚಿನ್ನದ ಬಿಸ್ಕತ್ತುಗಳನ್ನು ಗಂಧವನ್ನು ಕೇರಳಕ್ಕೆ ಸಾಗಿಸತಕ್ಕಂತಹ ಪೈಪೋಟಿಯ ಓಡಾಟ ಬಹಳ ಇದೆ, ಇದು ಎಲ್ಲರಿಗೂ ಗೊತ್ತಿದೆ. ಈ 17 ಕಿಲೋ ಮೀಟರ್ ದಾಟಿ ಅಲ್ಲಿಗೆ ಹೋದರೆ ಸ್ವರ್ಗಕ್ಕೆ ಹೋದ ಹಾಗೆ. ಅದರ ಒಳಗೆ ಸಿಕ್ಕಿಬಿದ್ದರೆ ನರಕದಲ್ಲಿ ಬಿದ್ದ ಹಾಗೆ ಪೋಲೀಸರ ಕೈಗೇನಾದರೂ ಸಿಕ್ಕಿಬಿದ್ದರೆ ನರಕಕ್ಕೆ ಹೋದ ಹಾಗೆ ಆದ್ದರಿಂದ ಇದರ ಬಗ್ಗೆ ಜಾಗೃತಿ ಬೇಕಾಗಿದೆ. ಇದರ ಬಗ್ಗೆ ಜಾಗೃತಿ ಇಲ್ಲವೆಂದು ಅಲ್ಲ, ಆದರೆ ಎಷ್ಟೋ ಕಣ್ಣುತಪ್ಪಿಸಿ ಹೋಗುವಂಥಾದ್ದು ಇದೆ. ಅಲ್ಲಿಗೆ ನನ್ನ ಮನೆ ಸಮೀಪ ಇದ್ದುದರಿಂದ ನನಗೆ ಅನೇಕ ದೂರುಗಳು ಬರುತ್ತಿದೆ. ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುತ್ತೀರಾ ?

ಶ್ರೀ ಧರ್ಮಸಿಂಗ್ :– ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ವಾಹನಗಳು ಅಲ್ಲಿ ಪೆಚ್ಚು ವೇಗದಿಂದ ಓಡಾಡುತ್ತವೆ. ಅಲ್ಲಿ ಒಂದು ಚೆಕ್‌ಪೋಸ್ಟ್ ಮಾಡಬೇಕೆಂದು ಇದೆ. ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ವಿಷಯ :– ಹೋಟೆಲ್ ಕಾರ್ಮಿಕರ ಕನಿಷ್ಠ ವೇತನಕ್ಕೆ ಸಂಬಂಧಿಸಿದ ಶಾಸನವನ್ನು ಅನ್ವಯಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 277 (1216)

ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ) :– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕನಿಷ್ಠ ವೇತನಕ್ಕೆ ಸಂಬಂಧಿಸಿದ ಶಾಸನವನ್ನು ಹೋಟೆಲ್ ಕಾರ್ಮಿಕರಿಗೆ ಅನ್ವಯಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ, ಅವರಿಗೆ ಗೊತ್ತು ಮಾಡಿರುವ ಕನಿಷ್ಠ ವೇತನವೆಷ್ಟು ? ಹಾಗಿದ್ದಲ್ಲಿ ಅದಕ್ಕೆ ಕಾರಣ ಗಳೇನು ?

ಇ) ಹೋಟೆಲ್ ಉದ್ಯಮದಲ್ಲಿ ನೇಮಕಗೊಂಡಿರುವ ಕಾರ್ಮಿಕರ ಸಂಖ್ಯೆ ಎಷ್ಟು ?

ಈ) ಕನಿಷ್ಠ ವೇತನ ಗೊತ್ತು ಮಾಡಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?

ಉ) ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಉಡ್‌ಲ್ಯಾಂಡ್ಸ್ ಹೋಟೆಲ್‌ನ ಕಾರ್ಮಿಕರ ಸ್ಥಿತಿಗತಿಗಳೇನು ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು) :–

ಅ) ಹೌದು.

ಆ) ರಾಜ್ಯದ 3 ವಲಯಗಳಲ್ಲಿನ ವಿವಿಧ ವರ್ಗದ ಹೋಟೆಲ್ ಕಾರ್ಮಿಕರಿಗೆ 285 ರೂ. ಗಳಿಂದ 425 ರೂ.ಗಳು, 265 ರೂ. ಗಳಿಂದ 400 ರೂ. ಗಳು ಮತ್ತು 245 ರೂ. ಗಳಿಂದ 380 ರೂ.ಗಳ ವರೆಗೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗಿದೆ. ಜೊತೆಗೆ ಅಂಗೀಕಾರಾರ್ಹ ತುಟ್ಟಿಭತ್ಯೆಯನ್ನು ಪಡೆಯುವರು.

ಕನಿಷ್ಠ ವೇತನ ಕಾಯ್ದೆ ಅನ್ವಯ ಎಲ್ಲಾ ಸೆಡ್ಯೂಲ್ ಎಂಪ್ಲಾಯ್‌ಮೆಂಟ್ಸ್‌ಗಳಿಗೆ ಕನಿಷ್ಠ ವೇತನ ನಿಗದಿ ಪಡಿಸಲಾಗುತ್ತಿದೆ. ಅದರಂತೆ, ಹೋಟೆಲ್ ಉದ್ಯಮಕ್ಕೂ ಕನಿಷ್ಠ ವೇತನವನ್ನು ನಿಗದಿ ಪಡಿಸಲಾಗಿದೆ.

ಇ) ಇಂತಹ ಸಮೀಕ್ಷೆಯನ್ನು ಮಾಡಿರುವುದಿಲ್ಲ.